ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಇಲ್ಲ

ಹೆಚ್ಚುವರಿ ಪಿ.ಎಸ್.ಐ ಹುದ್ದೆಗಳನ್ನು ನೇಮಕ ಮಾಡುವುದು

647 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗಾಗಲೇ ರಾಜ್ಯದಲ್ಲಿ ಪಿ.ಎಸ್.ಐ ಮತ್ತು ಎಫ್.ಪಿ.ಬಿ. ಇತರೆ ಪೋಲೀಸ್ ಇಲಾಖೆಯಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳೆಷ್ಟು?

ಆ) ಪಿ.ಎಸ್.ಐ (ಸಿವಿಲ್) ಹುದ್ದೆ ತುಂಬಲು ಸರ್ಕಾರ ಮಂಜೂರಾತಿ ಕೊಟ್ಟಿದ್ದು ಎಷ್ಟು?

ಇ) ಸರ್ಕಾರದ ಆದೇಶದ ನಂತರ ಪೋಲೀಸ್ ಇಲಾಖೆಯವರು ನೇಮಕಾತಿ ಜಾಹೀರಾತು ಮಾಡಿದ ಹುದ್ದೆಗಳೆಷ್ಟು?

ಈ) ಈಗಾಗಲೇ ನೇಮಕಾತಿ ಮಾಡಿದ ಹುದ್ದೆಗಳೆಷ್ಟು?

ಉ) ಕೆ.ಎಸ್.ಸಿ.ಎಸ್. ನಿಯಮದಲ್ಲಿ ಶೇಕಡ 10ಮತ್ತು 50ಹೆಚ್ಚುವರಿ ನೇಮಕಾತಿಯನ್ನು ಮಾಡಲು ಅವಕಾಶವಿರುವುದು ನಿಜವೇ?

ಊ) ಆಗಿದ್ದಲ್ಲಿ ಶೇಕಡಾ 10 ಹೆಚ್ಚುವರಿ ಪಟ್ಟಿ ಮಾಡಿರುವುದು ನಿಜವೇ ಸರಿಯೇ?

ಋ) ಪಿ.ಎಸ್.ಐ. ಹುದ್ದೆಗಳು ಖಾಲಿ ಇರುವುದರಿಂದ ಶೇಕಡಾ 50 ಹೆಚ್ಚುವರಿ ಮಾಡಲು ಅವಕಾಶವಿದ್ದು, ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) (1) ಪಿ.ಎಸ್.ಐ (ಸಿವಿಲ್) - 114
(2) ಆರ್.ಎಸ್.ಐ (ಸಿಎಆರ್/ಡಿಎಆರ್) 65
(3) ವಿಶೇಷ ಆರ್.ಎಸ್.ಐ (ಕೆಎಸ್ಆರ್‌ಪಿ) 65
(4) ಪಿ.ಎಸ್.ಐ (ವೈರ್‌ಲೆಸ್) 11
(5) ಪಿ.ಎಸ್.ಐ. (ಎಫ್.ಪಿ.ಬಿ) 30

ಆ) 327

ಇ) ಪಿ.ಎಸ್.ಐ (ಸಿವಿಲ್) 164
ಆರ್.ಎಸ್.ಐ (ಸಿಎಆರ್/ಡಿಎಆರ್) 15
ವಿಶೇಷ ಆರ್.ಎಸ್.ಐ (ಕೆಎಸ್ಆರ್‌ಪಿ) 15

ಈ) ಪಿ.ಎಸ್ಐ (ಸಿವಿಲ್) 121
ಆರ್.ಎಸ್.ಐ (ಸಿಎಆರ್/ಡಿಎಆರ್) 7
ವಿಶೇಷ ಆರ್.ಎಸ್.ಐ (ಕೆಎಸ್ಆರ್‌ಪಿ) 4

ಉ) ಹೌದು. ಕೆ.ಎಸ್.ಸಿ.ಎಸ್. (ಡೈರೆಕ್ಟ್ ರೆಕ್ರೂಟ್‌ಮೆಂಟ್ ಬೈ ಸೆಲೆಕ್ಷನ್) ನಿಯಮಗಳು, 1973ರ ಪ್ರಕಾರ.

ಊ) ಹೌದು

ಋ) ಪರಿಶೀಲಿಸಲಾಗುತ್ತಿದೆ.